ಕಾರಂಜಾ ಯೋಜನೆ ಕುರಿತು

1451 (1696) - ಶ್ರೀ ರಾಜೇಂದ್ರ ವರ್ಮ (ಹುಲ್ ಸೂರ್): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ನೀರಾವರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಆಗಿನ ಅಂದಾಜು ವೆಚ್ಚ ಎಷ್ಟಿತ್ತು. ಈ ಯೋಜನೆಯನ್ನು ಎಷ್ಟು ವರ್ಷಗಳಲ್ಲಿ ಪೂರ್ಣಗೊಳಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು.

ಆ) ಈ ನೀರಾವರಿ ಯೋಜನೆಯ ಪೂರ್ಣಗೊಳ್ಳಲು ಇನ್ನು ಎಷ್ಟು ಅವಧಿ ಬೇಕಾಗುತ್ತದೆ. ಈ ಯೋಜನೆಯ ಸಲುವಾಗಿ ಇಲ್ಲಿಯವರೆಗೂ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು;

ಇ) ಯೋಜನೆಯು ತೀವ್ರ ವಿಳಂಬ ವಾಗುತ್ತಿರಲು ಕಾರಣಗಳೇನು?

ಈ) ಶೀರ್ಘಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಕಾರಂಜಿ ನೀರಾವರಿ ಯೋಜನೆಯ 1971-72 ರಲ್ಲಿ ಕ್ರಮ ಪರಿಹಾರ ಕೆಲಸಗಳ ಅಡಿಯಲ್ಲಿ ಪ್ರಾರಂಭವಾಯಿತು. ಆಗಿನ ಅಂದಾಜು ವೆಚ್ಚ (1967-68)ರ ದರಗಳಂತೆ ರೂ.9.90 ಕೋಟಿಗಳಾಗಿತ್ತು. ಈ ಯೋಜನೆಯನ್ನು 5 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿತ್ತು.

ಆ) ಈ ಯೋಜನೆಯನ್ನು ಡಿಸೆಂಬರ್ 2002ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯ ಸಲುವಾಗಿ ಫೆಬ್ರವರಿ 2002 ರವರೆಗೆ 306.70 ಕೋಟಿ ರೂ. ವೆಚ್ಚ ಮಾಡಲಾಗಿದೆ.

ಇ) ಈ ಯೋಜನೆಗೆ ಪ್ರತಿ ವರ್ಷವೂ ಮಂಜೂರು ಮಾಡುತ್ತಿದ್ದ ಅನುದಾನದ ಅನುಸಾರ ಯೋಜನೆ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗುತ್ತಿತ್ತು. ಪ್ರತಿ ವರ್ಷವು ಈ ಯೋಜನೆಗೆ ಮಂಜೂರಾದ ಅನುದಾನದಷ್ಟು ಹಣಕಾಸನ್ನು ಒದಗಿಸಲು ಸಾಧ್ಯವಾಗಿದೆ, ಈ ಯೋಜನೆಯ ಕಾಮಗಾರಿಯ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ.

ಈ ಯೋಜನೆಯ ಭೂ ಸ್ವಾಧೀನಕ್ಕೆ ಸಂಬಂಧಪಟ್ಟ ಸಮಸ್ಯೆಗಳಿಂದಲೂ ಹಾಗೂ ಪರಿಹಾರ ನೀಡುವ ಸಮಸ್ಯೆಗಳಿಂದಲೂ ಯೋಜನೆಯ ಕೆಲಸವು ಕುಂಠಿತವಾಗಿರುತ್ತದೆ.

ಈ ಯೋಜನೆಯಡಿಯಲ್ಲಿ ತಾಂತ್ರಿಕ ಸಿಬ್ಬಂದಿಯ ಕೊರತೆಯಿಂದಲೂ ಕುಂಠಿತವಾಗಿರುತ್ತದೆ.

ಈ) ಈ ಯೋಜನೆಯನ್ನು ಎ.ಐ.ಬಿ.ಪಿ ರಡಿಯಲ್ಲಿ ಕೇಂದ್ರ ಸರ್ಕಾರದ ಸಹಾಯ ಅನುದಾನವನ್ನು ಪಡೆಯುತ್ತಿದ್ದು, ಈ ಯೋಜನೆಯನ್ನು ಡಿಸೆಂಬರ್ 2002ರ ಒಳಗಾಗಿ ಪೂರ್ಣಗೊಳಿಸಲು ಬಾಕಿ ಇರುವ ಕೆನಾಲ್ ಕಾಮಗಾರಿಗಳ ಸರ್ವೆ ಕಾರ್ಯವನ್ನು ಖಾಸಗಿಯವರಿಗೆ ವಹಿಸಿಕೊಡುವ ನಿಟ್ಟಿನಲ್ಲಿ ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲಾಗಿದೆ. ಇದಲ್ಲದೇ ಯೋಜನೆಯ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತ ಕಾರ್ಯಕ್ರಮವನ್ನು ರೂಪಿಸಿಕೊಂಡು ಅದರಂತೆ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.